**ದಿನಾಂಕಃ 05/04/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 1, 4, 7 ರಿಂದ 11 ನೇ ಪ್ರತಿವಾದಿ ಪರ ಶ್ರೀ ಸಿ.ಕೆ.ಎಂ ವಕೀಲರಿಂದಃ**

1. ನಾನು ಮತ್ತು ಇತರೆ ವಾದಿಗಳು ಹರಿಜನ ಜನಾಂಗಕ್ಕೆ ಸೇರಿದವರು. 1 ರಿಂದ 10 ನೇ ಪ್ರತಿವಾದಿಗಳು ನಾಮಧಾರಿ ಗೌಡ ಜನಾಂಗಕ್ಕೆ ಸೇರಿದವರು ಎಂದರೆ ಸರಿ. 11 ನೇ ಪ್ರತಿವಾದಿ ಹರಿಜನ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನಾವು ಈ ದಾವೆಯನ್ನು ಸರ್ವೆ ನಂ.32/2, 32/3, 32/4 ಕ್ಕೆ ಹೂಡಿದ್ದೇವೆ. ಸರ್ವೆ ನಂ.32/2 ರ 35 ಗುಂಟೆ, 32/3 ರ 35 ಗುಂಟೆ, 32/4 ರ 35 ಗುಂಟೆ ಜಮೀನಿಗೆ ಈ ದಾವೆ ಹೂಡಿದ್ದೇವೆ. ಈಗ ಹೇಳಿದ ಸ್ವತ್ತುಗಳು ಮೂಲತಃ ಬೊಮ್ಮೇಗೌಡರ ಮಾಲೀಕತ್ವದಲ್ಲಿ ಇತ್ತು. ದೇವಯ್ಯ, ಹೇಳವಯ್ಯ, ಕರಿಯಯ್ಯ, ಕರಿಯಯ್ಯನ ಮಕ್ಕಳಾದ ನಮ್ಮ ಮಾಲೀಕತ್ವದಲ್ಲಿದೆ. ಬೊಮ್ಮೇಗೌಡರವರು ನಾಮಧಾರಿ ಗೌಡ ಜನಾಂಗಕ್ಕೆ ಸೇರಿದ್ದಾರೆ. ಸದರಿ ಸ್ವತ್ತುಗಳು

ಬೊಮ್ಮೇಗೌಡ ರವರಿಂದ ಹೆಳವಯ್ಯ ಮತ್ತು ಅವರ ಮಗ ಕರಿಯಯ್ಯ ರವರಿಗೆ ಮಾರಾಟವಾಗಿದೆ. 1953 ರಲ್ಲಿ ಸದರಿ ಮಾರಾಟವಾಗಿದೆ. ತಾರೀಖು, ತಿಂಗಳು ಹೇಳಲು ಆಗುವುದಿಲ್ಲ. ಎಷ್ಟು ಪ್ರತಿಫಲದ ಮೊತ್ತಕ್ಕೆ ಮಾರಾಟವಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವನ್ನು ನಾವು ನಮ್ಮ ವಕೀಲರಿಗೆ ನೀಡಿದ್ದೇವೆ. ಸದರಿ ಕ್ರಯಪತ್ರದಲ್ಲಿ ಉಂಡೆ ಲೆಕ್ಕದಲ್ಲಿ ಸರ್ವೆ ನಂ.32/2, 2 ಎಕರೆ 22 ಗುಂಟೆ ಎಂದು ನಮೂದಿದೆ.

2. ನನಗೆ ಕನ್ನಡ ಓದಲು ಗೊತ್ತಿಲ್ಲ, 2 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಿಪಿ.1 ರಿಂದ 18 ರಲ್ಲಿರುವ ಅಂಶಗಳನ್ನು ತಿಳಿದು ಹಾಜರುಪಡಿಸಿದ್ದೇನೆ. ನಮ್ಮ ಕುಟುಂಬದ ಮೂಲ ಪುರುಷರೆಂದರೆ ದೇವಯ್ಯ, ಹೆಳವಯ್ಯ, ಕರಿಯಯ್ಯ. ದೇವಯ್ಯನ ತಂದೆಯ ಹೆಸರು ಗೊತ್ತಿಲ್ಲ. ದ್ಯಾವಪ್ಪ ಬಿನ್ ಬೊಮ್ಮಣ್ಣ ಎಂದರೆ ಯಾರೆಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ನಿಪಿ.2 ರಿಂದ 4 ರ ಪಹಣಿ ಪತ್ರಿಕೆಗಳಲ್ಲಿ ಸರ್ವೆ ನಂ. 32/2 ಪುಟ್ಟೇಗೌಡ ಬಿನ್ ದ್ಯಾವೇಗೌಡ ರವರ ಹೆಸರಿನಲ್ಲಿದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆದರೆ ದೇವಯ್ಯನ ಹೆಸರಿನಲ್ಲಿದೆ. ನಿಪಿ.2 ರಿಂದ 4 ನ್ನು ದೇವಯ್ಯ ರವರ ಹೆಸರಿನಲ್ಲಿದೆ ಎಂದು ತಿಳಿದು ಹಾಜರುಪಡಿಸಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸರ್ವೆ ನಂ.32/2 ರ 2 ಎಕರೆ 23 ಗುಂಟೆ ಜಮೀನನ್ನು ಪುಟ್ಟೇಗೌಡ ಬಿನ್ ದ್ಯಾವೇಗೌಡ ರವರಿಂದ ನಿವಾಗಲೀ, ನಿಮ್ಮ ತಂದೆಯಾಗಲೀ, ನಿಮ್ಮ ತಾತ, ಮುತ್ತಾತನಾಗಲೀ ಖರೀದಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಆದರೆ ನನ್ನ ತಂದೆ ಕರಿಯಯ್ಯ ರವರು ಖರೀದಿಸಿದ್ದಾರೆ. ದೇವೆಗೌಡರಿಂದ ಖರೀದಿಸಿದ್ದಾರೆಂದು ಹೇಳುತ್ತಿದ್ದರು.

3. ನಿಪಿ.6 ಆರ್.ಟಿ.ಸಿಯಲ್ಲಿ ಸರ್ವೆ ನಂ.32/2 ಪುಟ್ಟೇಗೌಡ ಬಿನ್ ದ್ಯಾವೇಗೌಡ ಎಂದು ನಮೂದಿದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ.7 ಮತ್ತು 8 ರಲ್ಲಿ ಪುಟ್ಟೇಗೌಡ ಬಿನ್ ದ್ಯಾವೇಗೌಡ ರವರ ಪಿತ್ರಾರ್ಜಿತ ಆಸ್ತಿ ಎಂದು ನಮೂದಿದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆದರೆ ದೇವಯ್ಯನವರ ಆಸ್ತಿ. ಅಣ್ಣೇಗೌಡ ಬಿನ್ ದ್ಯಾವೇಗೌಡ ರಿಂದ ಸರ್ವೆ ನಂ.32/2 ರ ಜಮೀನನ್ನು ನಾನಾಗಲೀ, ನನ್ನ ತಂದೆಯಾಗಲೀ, ನನ್ನ ತಾತ ಮುತ್ತಾತನಾಗಲೀ ಖರೀದಿಸಿಲ್ಲ, ಆದರೆ ನನ್ನ ತಂದೆ ಕರಿಯಯ್ಯ ಖರೀದಿಸಿದ್ದಾರೆ.

4. ನನಗೆ ಪುಟ್ಟಸ್ವಾಮಿಯವರ ಹೆಂಡತಿ ಜಯಮ್ಮ ಯಾರೆಂದು ಗೊತ್ತಿಲ್ಲ. ನಿಪಿ.12ರ ಪ್ರಕಾರ ಸರ್ವೇ ಮಾಡಿ ಸರ್ವೆ ನಂ.32/2 ಜಮೀನನ್ನು 35 ಗುಂಟೆಯಲ್ಲಿ ಉಳಿಸಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ.32/3 ರಲ್ಲಿ 34 ಗುಂಟೆ ಉಳಿಸಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ.32/4ರಲ್ಲಿ 34 ಗುಂಟೆ ಉಳಿಸಿದ್ದಾರೆ ಎಂದರೆ ಸರಿಯಲ್ಲ. ಆದರೆ ಈಗ ಮಾಡಿಕೊಂಡಿದ್ದಾರೆ. ನಿಪಿ.12ರಲ್ಲಿ ಈಗ ಹೇಳಿದ ಪೋಡುಗಳನ್ನು ಮಾಡಿದ್ದಾರೆ ಸಾಕ್ಷಿಯು ಅವುಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 2 ನೇ ಪೋಡು ಪುಟ್ಟಣ್ಣಯ್ಯ ಬಿನ್ ದ್ಯಾವೇಗೌಡರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸರ್ವೆ ನಂ.32/3 ಚಂದ್ರಮ್ಮ ಕೋಂ ಅಣ್ಣೇಗೌಡರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಅದನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ ಸರ್ವೆ ನಂ.32/4 ನಾಗೇಗೌಡ ಬಿನ್ ದ್ಯಾವೇಗೌಡ ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಅದನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

5. ಸರ್ವೆ ನಂ.32/2, ಸರ್ವೆ ನಂ.32/3 ಮತ್ತು 32/4ರಲ್ಲಿ 65 ವರ್ಷಗಳಿಂದ ಅನುಭೋಗದಲ್ಲಿದ್ದೇವೆ. ನಮ್ಮ ಸ್ವಾಧೀನಾನುಭವದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅಂದರೆ ಕ್ರಯಪತ್ರ, ಪಹಣಿ, ಕಂದಾಯ ರಸೀದಿ, ಪಟ್ಟಾ ಪುಸ್ತಕವನ್ನು ಹಾಜರುಪಡಿಸಿದ್ದೇನೆ. ನಮ್ಮ ಹೆಸರಿನಲ್ಲಿ ಯಾವುದೇ ದಾಖಲೆಗಳು ಇಲ್ಲ, ಯಾವುದೇ ಕಂದಾಯ ಕಟ್ಟಿಲ್ಲ ಎಂದರೆ ಸರಿಯಲ್ಲ.

6. ಮೂಲತಃ ದಾವಾಸ್ವತ್ತುಗಳು 1ನೇ ಪ್ರತಿವಾದಿಯ ತಾತನ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ದೇವಯ್ಯ ರವರ ಹೆಸರಿನಲ್ಲಿತ್ತು. ಅದು 1ನೇ ಪ್ರತಿವಾದಿಯವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ತಂದೆ ಮರಣಹೊಂದಿದ ನಂತರ ದಾವಾಸ್ವತ್ತುಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ 1ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಯಿತು ಎಂದರೆ ಸರಿಯಲ್ಲ. ಹಾಗಾಗಿ 1ನೇ ಪ್ರತಿವಾದಿ ಮತ್ತು ಅವರ ಕುಟುಂಬದವರೇ ದಾವಾಸ್ವತ್ತುಗಳ ಮಾಲೀಕತ್ವ ಮತ್ತು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ತಂದೆಯ ಹೆಸರು ದ್ಯಾವೇಗೌಡ ಎಂದರೆ ಸರಿ.

ದ್ಯಾವೇಗೌಡರಿಗೆ ಅಣ್ಣೇಗೌಡ, ಪುಟ್ಟಣ್ಣಯ್ಯ ಮತ್ತು ನಾಗೇಗೌಡ ರವರು ಮಕ್ಕಳು ಎಂದರೆ ಸರಿ. ಅಣ್ಣೇಗೌಡರ ಹೆಂಡತಿ ಚಂದ್ರಮ್ಮ ಎಂದರೆ ಸರಿ.

7. ನಾವು 1 ನೇ ಪ್ರತಿವಾದಿ ಮತ್ತು ಅವರ ಕುಟುಂಬಸ್ಥರಿಗೆ ದಾವಾಸ್ವತ್ತುಗಳನ್ನು ಮಾರಾಟ ಮಾಡಲು ಪ್ರಸ್ತಾಪಿಸಿದ್ದೆವು ಎಂದರೆ ಸರಿಯಲ್ಲ. ಅವರು ದಾವಾಸ್ವತ್ತುಗಳನ್ನು ಮಾರಾಟ ಮಾಡುವುದಿಲ್ಲವೆಂದು ತಿರಸ್ಕರಿಸಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಾವು ಅವರ ಜಿದ್ದು ಸಾಧಿಸಿದೆವು ಎಂದರೆ ಸರಿಯಲ್ಲ. ಆದ್ದರಿಂದ ನಾವು ದಾವಾಸ್ವತ್ತುಗಳು ಜವರಯ್ಯರವರ ಮಗ ಕರಿಯಯ್ಯ ರವರ ಸ್ವಯಾರ್ಜಿತ ಆಸ್ತಿಗಳು ಎಂದು ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮಗೆ ತೊಂದರೆ ಕೊಟ್ಟಿದ್ದಾರೆ. ಅವರು 'ನಮ್ಮದು ಜಮೀನು' ಎಂದು ಕೇಳಿದರು. ಪ್ರತಿವಾದಿಗಳು ನಾವು ದಾವಾಸ್ವತ್ತುಗಳ ಮಾಲೀಕರಲ್ಲ, ಸ್ವಾಧೀನದಲ್ಲಿಲ್ಲ ಎಂದು ತಿಳಿಸಿದ್ದರು. ಈ ರೀತಿ ನಮಗೆ 7-8 ವರ್ಷಗಳ ಹಿಂದೆ ಹೇಳಿದ್ದರು.

8. ನಿಪಿ.13 ರ ಪ್ರಕಾರ ಸರ್ವೆ ನಂ.32/4 ರಲ್ಲಿ 34 ಗುಂಟೆಯನ್ನು 11 ನೇ ಪ್ರತಿವಾದಿ 1 ನೇ ಪ್ರತಿವಾದಿ ಮತ್ತು ಅವರ ಕುಟುಂಬಸ್ಥರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಳ್ಳು ದಾಖಲೆ ಸೃಷ್ಟಿಸಿ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈಗ ಸದರಿ ಜಮೀನಿನ ಕಂದಾಯ ದಾಖಲೆಗಳು 11 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸುಳ್ಳಾಗಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 32/2 ರ 35 ಗುಂಟೆ ಜಮೀನನ್ನು ದ್ಯಾವೇಗೌಡರ ಮಗ ಪುಟ್ಟಣ್ಣಯ್ಯ ಮತ್ತು ಅವರ ಕುಟುಂಬಸ್ಥರಿಂದ 11 ನೇ ಪ್ರತಿವಾದಿ ಖರೀದಿಸಿದ್ದಾರೆ ಎಂದರೆ ಸಾಕ್ಷಿಯು ಸೃಷ್ಟಿಸಿಕೊಂಡು ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಕ್ರಯಪತ್ರವನ್ನು ಸಾಕ್ಷಿಗೆ ತೋರಿಸಿದಾಗ ನಾವೇ ಹಾಜರುಪಡಿಸಿದ್ದು ಎಂದು ತಿಳಿಸಿದ್ದು, ಮುಖ್ಯ ವಿಚಾರಣೆ ಆಗುವಾಗ ಕೈತಪ್ಪಿನಿಂದ ಗುರುತಿಸಿರುವುದಿಲ್ಲ. ಸದರಿ ಕ್ರಯಪತ್ರವನ್ನು **ನಿಪಿ.19** ಎಂದು ಇಂದು ಗುರುತಿಸಲಾಯಿತು.

9. 11 ನೇ ಪ್ರತಿವಾದಿ ಚಂದ್ರಮ್ಮ ಮತ್ತು ಅವರ ಕುಟುಂಬದವರಿಂದ ಸರ್ವೆ ನಂ. 32/3 ರಲ್ಲಿ 34 ಗುಂಟೆ ಜಮೀನನ್ನು ನಿಪಿ.14 ರ ಪ್ರಕಾರ ಖರೀದಿಸಿದ್ದಾರೆ ಎಂದರೆ ಸುಳ್ಳಾಗಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾಸ್ವತ್ತುಗಳ ಮೇಲೆ ನಮಗೆ ಯಾವುದೇ ಹಕ್ಕು ಮಾಲೀಕತ್ವ ಇಲ್ಲದಿದ್ದರೂ ದಾವಾಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ಜವರಯ್ಯನ ಮಗ ಕರಿಯಯ್ಯ ರವರ ಸ್ವಯಾರ್ಜಿತ ಆಸ್ತಿಗಳು ಎಂದು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳು ನಮ್ಮ ಸ್ವಾಧೀನ ಅನುಭವದಲ್ಲಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿ ಖರೀದಿ ಮಾಡಿದ ನಂತರ ಕ್ರಯಪತ್ರಗಳಲ್ಲಿ ನಮೂದಿಸಿರುವ ಸ್ವತ್ತುಗಳಲ್ಲಿ ಅವರೇ ಮಾಲೀಕರಾಗಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮಗೆ ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹಿ.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**